## ಅಧ್ಯಾಯ - 4

# ದೇವರ ವಾಕ್ಯವನ್ನು ಅಭ್ಯಾಸ ಮಾಡುವುದು

### ಆತ್ಮೀಯವಾಗಿ ಬೆಳೆಯುವ ಅವಶ್ಯಕತೆ

ಈಗ ನೀನು ಕ್ರಿಸ್ತನಾಗಿದ್ದು ಜೀವಿಸುವಾಗ ಆತನಲ್ಲಿ ನೂತನ ಸೃಷ್ಟಿಯಾಗಿದ್ದೀ. ನೀನು ಹೊಸದಾಗಿ ಹುಟ್ಟಿದ ಚಿಕ್ಕ ಮಗುವಿನಂತೆ ಕ್ರಿಸ್ತನಲ್ಲಿ ಬೆಳೆಯಬೇಕೆಂದು ವಾಕ್ಯವೆಂಬ ಹಾಲನ್ನು ಕುಡಿಯಬೇಕೆಂದು ದೇವರ ವಾಕ್ಯವು ಬೋಧಿಸುತ್ತದೆ. (೨ ಕೊರಿಂಥ ೫ : ೧೭)

> ''ಹಸು ಮಕ್ಕಳಂತೆ ಪಾರಮಾರ್ಥಿಕವಾದ ಶುದ್ಧ ಹಾಲನ್ನು ಬಯಸಿರಿ. ಅದರಿಂದ ಬೆಳೆಯುತ್ತಾ ರಕ್ಷಣೆಯನ್ನು ಹೊಂದುವಿರಿ''
>
> (೧ ಪ್ರೇತ್ರ ೨ : ೨)

ಹಾಲು ಎಂದರೆ ದೇವರ ವಾಕ್ಯವೆಂದು ಅರ್ಥ. ವಾಕ್ಯವನ್ನು ಅನುದಿನವೂ ಓದುತ್ತಾ, ಧ್ಯಾನಮಾಡುತ್ತಾ. ವಿಧೇಯತೆಯನ್ನು ತೋರಿಸಬೇಕು. ಇದು ಕ್ರೈಸ್ತರ ಬೆಳವಣಿಗೆಗೆ ಆದಾರವಾಗಿದೆ. ಈ ರೀತಿಯಾಗಿ ಕ್ರಿಸ್ತನಲ್ಲಿ ಇಲ್ಲದಿದ್ದರೆ ನಾವು ದೇವರ ದೃಷ್ಟಿಯಲ್ಲಿ ಚಿಕ್ಕವರಾಗಿದ್ದೇವೆ.

### ಏನು ಮಾಡಬೇಕು ?

ಸತ್ಯವೇದ ಗ್ರಂಥದಲ್ಲಿರುವ ಎಲ್ಲಾ ಅಧ್ಯಾಯಗಳು ಹೊಸ ಒಡಂಬಡಿಕೆಯಲ್ಲಿ ನೆರವೇರುವ ಬಗ್ಗೆಯನ್ನು ನಾವು ನೋಡಬಹುದು. ನಮಗೆ ಅನುಕೂಲವಾದ ರೀತಿಯಲ್ಲಿ ಗುಡ್‌ನ್ಯೂಸ್ ಫರ್ ಮಾಡರನ್‌ಮನ್ ಅಥವಾ ಲಿವಿಂಗ್ ಬೈಬಲ್, ನ್ಯೂ ಇಂಟರ್ ನ್ಯಾಶನಲ್ ಬೈಬಲ್‌ಗಳು ಧ್ಯಾನ ಮಾಡಲು ತುಂಬಾ ಸಹಕಾರಿಯಾಗಿದೆ. ನಾವು ಪ್ರತಿದಿನವೂ ದೇವರ ವಾಕ್ಯವನ್ನು ಓದುತ್ತಾ ಅನೇಕ ಅಂಶಗಳನ್ನು ಕುರಿತು ತಿಳಿದುಕೊಳ್ಳಬಹುದು. ನಿಜವಾಗಿ ಹೇಳಬೇಕೆಂದರೆ ದೇವರ

ವಾಕ್ಯವನ್ನು ಕ್ರಮವಾಗಿ ಪ್ರತಿ ದಿನವೂ ಓದಬೇಕು. ಮುಂದು ಹೊಸ ಒಡಂಬಡಿಕೆಯನ್ನು ಓದಲು ಆರಂಭಿಸಬೇಕು. ಸಮಯ ಸಿಕ್ಕದಾಗಲೆಲ್ಲಾ ೩ ಅಥವಾ ೪ ಅಧ್ಯಾಯಗಳನ್ನು ಜಾಗ್ರತೆಯಾಗಿ ಓದಬೇಕು. ಓದುವ ಮುಂದು ಪ್ರಾರ್ಥನೆ ಮಾಡಿ ದೇವರು ತನ್ನ ವಾಕ್ಯದ ಅರ್ಥವನ್ನು ತಿಳಿಸುವಂತೆ ಕೇಳಿಕೊಂಡು, ಯೇಸುಕ್ರಿಸ್ತನೇ ನನ್ನೊಡನೆ ಮಾತನಾಡು ಎಂದು ಕೇಳಿ ನಂಬಿ ದೇವರ ವಾಕ್ಯವನ್ನು ಒಂದು ಕ್ಯಾಲೆಂಡರ್ ವರ್ಷದಲ್ಲಿ ಆಟಂಕವಿಲ್ಲದೆ ಓದಿ, ದ್ಯಾನಿಸಿ ಪೂರ್ಣಗೊಳಿಸಬಹುದು.

## ಸಲಹೆಗಳು :

- ದೇವರ ವಾಕ್ಯವನ್ನು (ಬೈಬಲ್‌ನ್ನು) ಓದುವಾಗಿ ಮುಖ್ಯವಾದ ವಚನಗಳನ್ನು ಗುರ್ತುಮಾಡಿಕೊಳ್ಳಬೇಕು. ಹೀಗೆ ಅಂಡರ್‌ಲೈನ್ ಮಾಡಿದರೆ ಒಳ್ಳೆಯದು.
- ಬೈಬಲ್ ಓದುವಾಗ ಪೆನ್ನು, ಪುಸ್ತಕವನ್ನು ಇಟ್ಟುಕೊಂಡರೆ ಬರೆದುಕೊಳ್ಳಲು. ಆತ್ಮಕ್ಕೆ ಬೇಕಾದ ಒಳ್ಳೆಯ ಅಹಾರವನ್ನು ಪಡೆಯಲು ಸಾದ್ಯವಾಗುತ್ತದೆ.
- ದೇವರು ಕೊಟ್ಟಿರುವ ಅನೇಕ ಭರವಸೆ ವಾಕ್ಯಗಳನ್ನು ಬಾಯಿಪಾಠ ಮಾಡಿಕೊಳ್ಳುವುದು ಒಳ್ಳೆಯದು.
- ದೇವರ ಭರವಸೆಯ ವಾಕ್ಯಗಳನ್ನು ತಿಳಿದುಕೊಳ್ಳಲು ಕಷ್ಟಪಡಬೇಕು. ಹತ್ತಿರವಿರುವ ಅತ್ಮೀಯರಾದ ಸೇವಕರಿಂದ ನಿನ್ನ ಸಂದೇಹಗಳನ್ನು ವಿವರಿಸಿ ಸತ್ಯಸಂಗತಿಕಗಳನ್ನು ತಿಳಿದುಕೊಳ್ಳವುದು ಒಳ್ಳೆಯದು.
- ಕೆಲವು ಒಳ್ಳೆಯ ವಾಕ್ಯಾನುಸಾರವಾದ ಆತ್ಮೀಯ ಸಂಘದಲ್ಲಿ ಬೈಬಲ್ ವಾಕ್ಯ ಓದುವ ಕಾರ್ಯಕ್ರಮ ನಡೆಯುತ್ತಿರುವಾಗಿ ಅವರೊಂದಿಗೆ ಸೇರಿ ಕಲಿತುಕೊಳ್ಳುವುದು ಒಳ್ಳೆಯದು.

## ಮಾರ್ಗವನ್ನು ತೋರಿಸುವುದು

ಕ್ರೈಸ್ತವ ಜೀವನವು ಒಂದು ಪ್ರಯಾಣ ಇದ್ದಹಾಗಿದೆ. ಆದುದರಿಂದ ದೇವರ ವಾಕ್ಯವು ಹೀಗೆ ಹೇಳುತ್ತದೆ.

> ''ನಿನ್ನ ವಾಕ್ಯವು ನನ್ನ ಕಾಲಿಗೆ ದೀಪವು ನನ್ನ ದಾರಿಗೆ'' ಬೆಳಕು ಆಗಿದೆ
>
> ಕೀರ್ತನೆ ೧೧೯ : ೧೦೫

ದೇವರ ವಾಕ್ಯವನ್ನು ನಾವು ಧ್ಯಾನಮಾಡಿದಾಗ ದೇವರು ನಮಗೆ ಅನೇಕ ಸಲಹೆಗಳನ್ನು ಕೊಟ್ಟು ನಮ್ಮೊಂದಿಗೆ ಮಾತನಾಡುತ್ತಾನೆ. ಮತ್ತು ದೇವರೇ ನಮ್ಮ ನಿಜವಾದ ಸೃಷ್ಟಿಕರ್ತನೆಂದು, ಈ ಲೋಕವನ್ನು ಉಂಟುಮಾಡಿ ದೇವರು ನಮ್ಮನ್ನು ತನ್ನ ಶ್ರೇಷ್ಟವಾದ ಪ್ರೀತಿಯಿಂದ ನಮಗೆ ಶಾಂತಿ ಸಮಾಧಾನವನ್ನು ಕೊಟ್ಟು ಪ್ರತಿ ದಿನವೂ ಕರ್ತನಾದ ಯೇಸುಕ್ರಿಸ್ತನಲ್ಲಿ ನಮ್ಮ ಪ್ರತಿಯೊಂದು ಅವಸರಗಳನ್ನು ತೀರಿಸುತ್ತಿದ್ದಾನೆ.

> ''ಚಪಲ ಚಿತ್ತರನ್ನು ದ್ವೇಶಿಸುತ್ತೇನೆ ನಿನ್ನ ಧರ್ಮ ಶಾಸ್ತ್ರವನ್ನು ಪ್ರೀತಿಸುತ್ತೇನೆ''
>
> (ಕೀರ್ತನೆ ೧೧೯ : ೧೩)

## ದೇವರ ವಾಕ್ಯವು ಏನು ಮಾಡುತದೆ ?

ದೇಘರ ವಾಕ್ಯವು ನಮ್ಮ ಜೀವನದಲ್ಲಿ ಬರುವ ಕಷ್ಟಗಳನ್ನು ಎದುರಿಸಲು ನಮಗೆ ಧೈರ್ಯವನ್ನು, ಶಕ್ತಿಯನ್ನು ಕೊಡುತ್ತದೆ. ಯೊಕೆಂದರೆ ನಾವು ಯೇಸುಕ್ರಿಸ್ತನ ವಾಕ್ಯದಲ್ಲಿ ನಂಬಿಕೆಯಿಟ್ಟಿದ್ದೇವೆ.

> ''ದೈವಪ್ರೇರಿತವಾದ ಶಾಸ್ತ್ರವು ಉಪದೇಶಕ್ಕೂ, ಖಂಡನೆಗೂ ತಿದ್ದು ಪಾಟಿಗೂ ನೀತಿ ಶಿಕ್ಷೆಗೊ ಉಪಯುಕ್ತವಾಗಿದೆ. ಆದದರಿಂದ ದೇವರ ಮನುಷ್ಯನು ಪ್ರವೀಣನಾಗಿ ಸಕಲ ಸತ್ಕಾರ್ಯಕ್ಕೆ ಸನ್ನದ್ದ ನಾಗುವನು''
>
> (೨ ತಿಮೊಥೆ ೩ : ೧೬, ೧೭)

ದೇವರ ವಾಕ್ಯವು ಊಟ ಇದ್ದಹಾಗೆ. ಅದು ನಾವು ದೇವರೊಂದಿಗೆ ಪ್ರತಿದಿನವೂ ಆನಂದಿಸುವ ರೀತಿಯನ್ನು ತಿಳಿಸುತ್ತದೆ. ಹೀಗೆ ದೇವರಲ್ಲಿ ಕ್ರಿಸ್ತ ಯೇಸುವಿನೊಂದಿಗೆ ಸಂತೋಷದಿಂದ ಮುಂದಕ್ಕೆ ಸಾಗುವವರಾಗಿದ್ದೇವೆ.

ಹೊಸ ಒಡಂಬಡಿಕೆಯೇ ನಮಗೆ ಜೀವನದ ದಾರಿ. ಈ ಲೋಕದ ಇತರ ಯಾವುದೇ ಪುಸ್ತಕಗಳ ಮೂಲಕ ನಮಗೆ ರಕ್ಷಣೆ ಇಲ್ಲ, ಶಾಂತಿ ಇಲ್ಲ ಮುಂದೆ ಬರುವ ಅಪಾಯದಿಂದ ತಪ್ಪಿಸಿಕೊಳ್ಳುವ ಮಾರ್ಗವಿಲ್ಲ.

## ಈ ಲೋಕದ ಮುಖ್ಯವಾದ ಚರಿತ್ರೆಯ ವಿವರಣೆ

| ಹಳೆಯ ಬರವಣಿಗೆ | ತಿಮೊಥ್ತೆಡ್ಸ್‌ನ ಚರಿತ್ರೆ | ಸಿಸರನ ಗಾಲ್ಲಿಕ್ ಯುದ್ಧ | ಟಾಸಿಟಸ ಚರಿತ್ರೆ | ನಾಲ್ಕು ಸುವಾರ್ತೆಗಳು |
|---|---|---|---|---|
| ಪ್ರಾರಂಭದ ಪುಸ್ತಕದ ವರ್ಷ | ಕ್ರಿ.ಶ. ೪೬೦-೪೦೦ | ಕ್ರಿ.ಶ. ೫೮-೫೦ | ಸೂಮಾರು ೧೦೦ ಕ್ರಿ.ಶ. | ಕ್ರಿ.ಶ. ಕ್ರಿ.ಶ. ೬೫-೯೦ |
| ಹಳೆಯ ಗ್ರಂಥಗಳು | ೯೦೦ ಕ್ರಿ.ಶ. ಕೆಲವು ಪ್ರತಿಗಳು | ಕ್ರಿ.ಶ. ೮೫೦ | ಕ್ರಿ.ಶ. ೮೦೦ | ಕ್ರಿ.ಶ. ೩೫೦ ಗ್ರಂಥದ ಸುರುಳಿಗಳು |
| ಮದ್ಯಕಾಲದ ಸಮಯ | ೧,೩೦೦-೯೦೦ (೪೦೦ ವರ್ಷಗಳು) | ೯೦೦ ವರ್ಷಗಳು | ೩೦೦ವರ್ಷಗಳು | ೫೦ ವರ್ಷಗಳ ಗ್ರಂಥಗಳು |
| ಇಲ್ಲಿಯ ವರೆಗೆ ಇರುವ ಪ್ರತಿಗಳು | ೮ | ೧೦ | ೪ | ೨೦೦೦ ವರ್ಷಗಳಷ್ಟು ಹಳೆಯ ಗ್ರಂಥಗಳು |

ಯೇಸು ಕ್ರಿಸ್ತನು ಶಿಲುಬೆಯಲ್ಲಿ ಮರಣವನ್ನು ಹೊಂದಿ ಮೂರನೆ ದಿನದಲ್ಲಿ ಪುನಃ ಮರಣದಿಂದ ಜೀವಕ್ಕೆ ಬಂದು ಸತ್ತವರೊಳಗಿಂದ ಎದ್ದುಬಂದನು. ಆ ಸಮಯದಲ್ಲಿ ಭಕ್ತಿವಂತರಾಗಿ ಜೀವಿಸಿದ ಅನೇಕರು ಸತ್ತು ಹೋದವರು

ಸಜೀವರಾಗಿ ಎದ್ದರು ಮತ್ತು ಎದ್ದು ಪಟ್ಟಣದಲ್ಲಿ ಅನೇಕರಿಗೆ ತಮ್ಮನ್ನು ಕಾಣಿಸಿಕೊಂಡರು. ಇಷ್ಟೇ ಅಲ್ಲದೆ. ಯೇಸು ಕ್ರಿಸ್ತನು ಪುನರುಥ್ಥಾನ ವಾದಾಗ ಸುಮಾರು ೫೦೦ ಕ್ಕೊ ಹೆಚ್ಚು ಸಹೋದರರು ಅಲ್ಲಿ ನಿಂತು ನೋಡಿದ್ದನು ನಿಜವೆಂದು ಹೇಳಿ ಸಾಕ್ಷಿಕೊಟ್ಟಿದ್ದಾರೆ. ದೇವರು ತನ್ನ ಭಕ್ತರ ಮೂಲಕವಾಗಿ ೨೦೦೦ ವರ್ಷಗಳ ಹಿಂದೆ ನಡೆದ ಎಲ್ಲಾ ಕಾರ್ಯಗಳನ್ನು ಬರೆಸಿದ್ದಾನೆ. ಇದು ನಿಜವಲ್ಲಿದ ಪಕ್ಷದಲ್ಲಿ ದೇವರ ವಾಕ್ಯದ ಗ್ರಂಥದ ಸುರುಳಿಗಳು ಇಲ್ಲಿಯವರೆಗೆ ಇರಲು ಸಾದ್ಯವಾಗುತ್ತಿಲ್ಲ. ನಿನ್ನ ವಾಕ್ಯವೇ ಸತ್ಯವಾದದ್ದು. ಇದರ ಪ್ರಕಾರ ಪ್ರಪಂಚದ ಎಲ್ಲೆಡೆಯಲ್ಲಿ ಯೇಸುಕ್ರಿಸ್ತನ ಶುಭವಾರ್ತೆಯು ಸಾರಲಾಗುತ್ತಿದೆ.

## ಪ್ರಶ್ನೆಗಳು ಮತ್ತು ವಿಷಯಗಳು

೧. ೨ ತಿಮೊಥೆ ೩ : ೧೬, ೧೭ ನಲ್ಲಿ ಇರುವ ನಾಲ್ಕು ಅಂಶಗಳು ಹೇಳುವ ದೇವರ ಉದ್ದೇಶವೇನು.

೨. ಯೆಹೋಶುವ ೧ : ೭, ೮ ನೆಯ ವಾಕ್ಯಗಳನ್ನು ಓದಿ ಈ ಕೆಳಗಿನವುಗಳಿಗೆ ಉತ್ತರ ಬರೆಯಿರಿ.

ಅ) ದೇವರ ವಾಕ್ಯವನ್ನು ಹೇಗೆ ಅಬ್ಯಾಸ ಮಾಡಬೇಕು ?

ಆ) ದೇವರ ವಾಕ್ಯವನ್ನು ಹೇಗೆ ಅನುಸರಿಸಬೇಕು ?

ಇ) ದೇವರ ವಾಕ್ಯವನ್ನು ಓದು ವುದರ ಮೂಲಕ ನಮಗೆ ಉಂಟಾಗುವ ಅನುಕೂಲವೇನು ?

ಈ) ದೇವರ ವಾಕ್ಯದಿಂದ ನಿನಗೆ ಹೇಗೆ ಆಶೀರ್ವಾದ ಬರುತ್ತದೆ ?

೩. ಬೈಬಲ್‌ಗೂ ಇತರ ಗ್ರಂಥಗಳಿಗೂ ಇರುವ ವ್ಯತ್ಯಾಸವೇನು ?

೧ ಥೇಸಲೋಕ ೨-೭೩

೪. ಯೇಸುವಿನ ಬೊದನೆಗಳು ನಮ್ಮನ್ನು ಹೇಗೆ ಬಲಗೊಳಿಸುತ್ತವೆ ?

( ಯೋಹಾನ ೮ : ೩೧, ೩೨)

೫. ದೇವರ ವಾಕ್ಯವು ನಮ್ಮಲ್ಲಿ ಹೇಗೆ ಕಾರ್ಯ ನಡೆಸುತ್ತದೆ ? (ಕೊಲಸ್ಸೆ ೩ : ೧೬, ರೋಮಾ ೧೫ : ೪)

೬. ಯೇಸು ಹೇಳಿದ ''ಮನುಷ್ಯನ ರೊಟ್ಟಿಯಿಂದ ಮಾತ್ರ ಜೀವಿಸುವುದಿಲ್ಲ'' ಎಂಬ ಮಾತಿನ ಅರ್ಥವೇನು ?

೭. ದೇವರ ವಾಕ್ಯವು ಹೇಗೆ ವರ್ಣಿಸಲ್ಪಟ್ಟಿದೆ (ಹಿಬ್ರಿಯ ೪ : ೧೨)

## ಪ್ರಾರ್ಥನೆ :

ಸರ್ವ ಶಕ್ತನಾದ ಯೇಸುಕ್ರಿಸ್ತನೆ ನನಗೆ ನೀನು ಬಯಲು ಪರಿಸಿದ ಬೈಬಲ್ ಗ್ರಂಥಕ್ಕಾಗಿ ನಿನಗೆ ಸ್ತೋತ್ರ. ಅದು ನಿನ್ನ ಜೀವವುಳ್ಳ, ರಕ್ಷಣೆಯನ್ನುಂಟು ಮಾಡುವ ಶಾಂತಿಯನ್ನು ಕೊಡುವ ಗ್ರಂಥವೆಂದು ನಂಬುತ್ತೇನೆ. ನಿನ್ನ ವಾಕ್ಯದ ಪ್ರಕಾರ ನಡೆದುಕೊಂಡು ಈ ಲೋಕದಲ್ಲಿ ನಿನಗೆ ಸಾಕ್ಷಿಯಾಗಿ ಜೀವಿಸಲು ಸಹಾಯ ಮಾಡುತ್ತಿಯೆಂದು ನಂಬಿ ಯೇಸು ಕ್ರಿಸ್ತನ ಹೆಸರಿನಲ್ಲಿ ಪ್ರಾರ್ಥಿಸಿ ಸ್ತುತಿಸುತ್ತೇನೆ. ಆಮೆನ್.